## EVIDENCE RECORDED IN-CAMERA

**1 ನೇ ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ., ರವರ ನ್ಯಾಯಾಲಯ, ನಂಜನಗೂಡು**

**ಸಿ.ಸಿಃ 1596/2013**

| | | | |
|---|---|---|---|
| ಸಾಕ್ಷಿದಾರರ ಹೆಸರು | | ನಾಗರತ್ನ | ಪ್ರಾಸಾಃ **3** |
| ತಂದೆಯ/ಗಂಡನ ಹೆಸರು | | ನಾಗರಾಜು | ಚಾಸಾಃ **1** |
| ವಯಸ್ಸು | | **35** ವರ್ಷ | |
| ಕೆಲಸ | | ಗೃಹಿಣಿ | ಸಾ ಪ್ರ ಬೋ |
| ವಾಸ | | ಹಿಂಗಲವಾಡಿ ಗ್ರಾಮ, ಗುಂಡ್ಲುಪೇಟೆ ತಾ. | ದಿಃ **21/02/2022** |

ಮುಖ್ಯ ವಿಚಾರಣೆ ಎ.ಪಿ.ಪಿ.ಯವರಿಂದಃ

ಆರೋಪಿ ಗೊತ್ತು. ಅವರು ನನ್ನ ಗಂಡ. ದಿನಾಂಕ **05.06.2011** ರಂದು ಕವಲಂದೆ ಗ್ರಾಮದ ಶೆಟ್ಟಯ್ಯನವರ ಮಗನಾದ ಆರೋಪಿಯ ಜೊತೆ ನನ್ನ ಮದುವೆ ಆಗಿರುತ್ತದೆ. ಮದುವೆ ಆದ ನಂತರ ನಮಗೆ **2** ವರ್ಷದ ಹೆಣ್ಣು ಮಗು ಇರುತ್ತದೆ. ಆರೋಪಿಗೆ ನನ್ನ ಮೇಲೆ ಯಾವಾಗಲೂ ಅನುಮಾನ. ಮದುವೆಗೆ ಮುಂಚೆ ನಾನು ಚಾಸಾ-**15** ರವಿ ಅವರ ಮೂಲಕ ರೂ. **2,00,000/-** ಹಣವನ್ನು ಆರೋಪಿಗೆ ವರದಕ್ಷಿಣೆಯಾಗಿ ಕೊಟ್ಟಿರುತ್ತೇನೆ. ಮದುವೆಯಾದ ನಂತರ ರೂ. **40,000/-** ಹಣವನ್ನು ಟ್ರಾಕ್ಟರ್ ರಿಪೇರಿಗಾಗಿ ಆರೋಪಿಯು ಹಣವನ್ನು ಕೇಳಿ ಪಡೆದಿರುತ್ತಾನೆ. ಆರೋಪಿಯು ಹಣವನ್ನು ಕೇಳಿದಾಗಲೆಲ್ಲಾ ಕೊಡುತ್ತಿರುವುದನ್ನು ನೋಡಿ ಹಂತ ಹಂತವಾಗಿ ಮತ್ತೆ ಹಣದ ಬೇಡಿಕೆಯನ್ನು ಇಡುತ್ತಿದ್ದ ಮತ್ತು ಮಾನಸಿಕವಾಗಿ ನನಗೆ ತೊಂದರೆ ಕೊಡುತ್ತಿದ್ದ. ಆರೋಪಿಯು ಕುಡಿತದ ಚಟಕ್ಕೆ ಬಲಿಯಾಗಿದ್ದು ಪ್ರತಿದಿನ ಕುಡಿದುಕೊಂಡು ಬಂದು ಏನು ಮಾಡುತ್ತಿದ್ದ ಎಂದು ಅವರಿಗೆ ಗೊತ್ತಾಗುತ್ತಿರಲಿಲ್ಲ. ಆರೋಪಿಯು ಕುಡಿದುಕೊಂಡು ಬಂದು ಗುಪ್ತ ಸ್ಥಳಗಳಿಗೆ ಚುಚ್ಚುವುದು ಮತ್ತು ಚಿತ್ರ ಹಿಂಸೆ ನೀಡುತ್ತಿದ್ದ. ಹಣವನ್ನು ನೀಡಿದಾಗ ಆರೋಪಿಯು ನನ್ನನ್ನು ಚೆನ್ನಾಗಿ ನೋಡಿಕೊಳ್ಳುತ್ತಿದ್ದ ಮತ್ತೆ ಹಣ ಬೇಕಾದಾಗ ನನಗೆ ಮಾನಸಿಕ ಮತ್ತು ದೈಹಿಕ ಹಿಂಸೆ ನೀಡಿ ಕೊಲೆ ಬೆದರಿಕೆ ಹಾಕುತ್ತಿದ್ದ. ನನಗೆ ಇನ್ನೊಂದು ಮದುವೆ ಮಾಡಿಕೊಳ್ಳಲು ತಾಕತ್ತು ಇದೆ ಎಂದು ಹೇಳಿ ನನಗೆ ವಿಚ್ಛೇದನ ಕೊಡಬೇಕಾಗಿ ಹೇಳಿ ಮಾನಸಿಕ ಹಿಂಸೆ ನೀಡಿ ನನ್ನ ಕತ್ತನ್ನು ಕೂಡ ಹಿಸುಕಿರುತ್ತಾನೆ.

ದಿನಾಂಕ **29.08.2013** ರಲ್ಲಿ ನಾನು ಪೋಲಿಸರಿಗೆ ದೂರನ್ನು ನೀಡಿರುತ್ತೇನೆ. ಸಾಕ್ಷಿಗೆ ಒಂದು ದಾಖಲಾತಿ ತೋರಿಸಿದ್ದು ಅದು ದೂರಾಗಿದ್ದು, ಅದನ್ನು ನಿಪಿ-**2** ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-**2**(ಎ) ಎಂದು ಗುರುತಿಸಲಾಯಿತು. ಅದೇ ದಿನ ಪೋಲಿಸಿನವರು ಕವಲಂದೆ ಯಲ್ಲಿ ಇರುವ ಆರೋಪಿಯ ಮನೆ ಮುಂದೆ ಬಂದು ಮಹಜರ್ ಮಾಡಿರುತ್ತಾರೆ. ಸಾಕ್ಷಿ ಸ್ಥಳ ಮಹಜರ್ ನೋಡಿ ಗುರುತಿಸಿದ್ದು ಅದು ಈಗಾಗಲೇ ನಿಪಿ-**1** ಎಂದು ಗುರುತಿಸಲಾಗಿದ್ದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-**1**(ಸಿ) ಎಂದು ಗುರುತಿಸಲಾಯಿತು. ನಾನು ದೂರಿನಲ್ಲಿ ಸುರೇಶ ಮತ್ತು ಮಂಜುಳಾ ರವರ ಕುಮ್ಮಕಿನಿಂದ ಅವರು ಸಹಾ ನನಗೆ ತೊಂದರೆ ನೀಡಿರುತ್ತಾರೆ ಎಂದು ದೂರಿನಲ್ಲಿ ಬರೆಸಿದ್ದೆ

ಆದರೆ ಅವರು ನನಗೆ ಯಾವುದೇ ತೊಂದರೆಯನ್ನು ನೀಡಿರುವುದಿಲ್ಲ ಮತ್ತು ಜಗಳಕ್ಕೆ ಕುಮ್ಮಕ್ಕು ಕೊಟಿರುವುದಿಲ್ಲ ಎಂದು ಈ ರೀತಿ ದಿನಾಂಕ **30.09.2013** ರಂದು ಪೋಲಿಸರ ಮುಂದೆ ನನ್ನ ಮರು ಹೇಳಿಕೆ ನೀಡಿರುತ್ತೇನೆ. ಈಗ ನ್ಯಾಯಾಲಯದ ಮುಂದಿರುವ ಆರೋಪಿಯೇ ನನಗೆ ಮಾನಸಿಕ ಮತ್ತು ದೈಹಿಕ ಹಿಂಸೆ ನೀಡಿ ವರದಕ್ಷಿಣೆ ಹಣ ತೆಗೆದುಕೊಂಡು ಬರುವಂತೆ ಒತ್ತಾಯ ಪಡಿಸಿರುತ್ತಾರೆ. ಮದುವೆಯ ಆಮಂತ್ರಣ ಪತ್ರಿಕೆಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಷಿ3 ಎಂದು ಗುರುತಿಸಲಾಯಿತು.

ಪಾಟೀ ಸವಾಲುಃ ಶ್ರೀ. ಎನ್.ಎಂ. ವಕೀಲರಿಂದಃ

ನಾನು ಬಿ.ಎ ವರೆಗೂ ಓದಿದ್ದೇನೆ. ಮದುವೆಯಾದ 2 ತಿಂಗಳಿಗೆ ನಾನು ಗರ್ಭವತಿಯಾದೆ. ಮಗು ನನ್ನ ತಂದೆಯ ಮನೆಯಲ್ಲಿ ಜನಿಸಿರುತ್ತಾನೆ. ಮಗು ಜನಿಸಿದ ನಂತರ ನಾನು ಆರೋಪಿಯ ಮನೆಗೆ ಹೋಗಿರುವುದಿಲ್ಲ. ಗರ್ಭಿಣಿಯ 8 ನೇ ತಿಂಗಳಿನಲ್ಲಿ ನನ್ನ ತಂದೆಯ ಮನೆಗೆ ಹೋಗಿರುತ್ತೇನೆ. ನಾನು 7 ತಿಂಗಳ ಗರ್ಭಿಣಿ ಆದಾಗಿನಿಂದಲೂ ಹೆಚ್ಚಿನ ಕಾಲ ನನ್ನ ತಂದೆಯ ಮನೆಯಲ್ಲಿ ವಾಸಮಾಡುತ್ತಿದ್ದೆ ಎಂದರೆ ಸರಿ, ಸಾಕ್ಷಿಯೂ ಆರೋಪಿಯೇ ನನ್ನನ್ನು ಬಲವಂತವಾಗಿ ನನ್ನ ತಂದೆಯ ಮನೆಯಲ್ಲಿ ಬಿಡುತ್ತಿದ್ದ ಮತ್ತು ಬಿಟ್ಟ 2-3 ದಿನಗಳಲ್ಲಿ ನಾನು ವಾಪಸ್ಸು ನನ್ನ ಗಂಡನ ಮನೆಗೆ ಹೋಗುತ್ತಿದ್ದೆ. ಆರೋಪಿಯು ಮಾಡಿದ ಹಣದ ಬೇಡಿಕೆಯನ್ನು ಈಡೇರಿಸಿದರೆ ಮಾತ್ರ ಅವರ ಮನೆಯಲ್ಲಿ ಇರಿಸಿಕೊಳ್ಳುತ್ತಿದ್ದರು ಇಲ್ಲದಿದ್ದರೆ ನನ್ನ ತಂದೆಯ ಮನೆಯಲ್ಲಿ ಬಿಟ್ಟುಬಿಡುತ್ತಿದ್ದರು. ದೂರನ್ನು ಕೊಡುವಾಗ ನನ್ನ ಗಂಡನ ಮನೆಯಲ್ಲಿ ವಾಸವಾಗಿದ್ದೆ ಆ ದಿನ ನನ್ನ ತಂದೆಯ ಮನೆಗೆ ಹೋಗಿ ನಂತರ ದೂರನ್ನು ಕೊಟ್ಟಿರುತ್ತೇನೆ. ದೂರನ್ನು ನಾನು ಒಬ್ಬಳೇ ಹೋಗಿ ಕೊಟ್ಟಿರುತ್ತೇನೆ. ನನ್ನ ಒಪ್ಪಿಗೆಯ ಮೇರೆಗೆ ಮದುವೆ ಆಗಿರುತ್ತದೆ. ಮದುವೆ ಯಾಗಿ ಒಂದು ವಾರದಲ್ಲಿ ಆರೋಪಿಯುು ಕುಡಿಯುತ್ತಾನೆ ಎಂದು ಗೊತ್ತಾಗಿರುತ್ತದೆ. ಚಾಸಾ-15 ರವರು ನನ್ನ ತಂದೆಯ ತಂಗಿಯ ಗಂಡ. ನಿಶ್ಚಿತಾರ್ಥ ಮತ್ತು ಮದುವೆ ಒಂದೆ ದಿನ ಆಗಿರುತ್ತದೆ. ನಿಶ್ಚಿತಾರ್ಥದ ದಿನ 2,00,000/- ರೂ ಹಣವನ್ನು ಆರೋಪಿಗೆ ನೀಡಿರುತ್ತಾರೆ. 2,00,000/- ರೂ ಹಣವನ್ನು ನನ್ನ ತಂದೆ ಹೊಂದಿಸಿ ಚಾಸಾ-15 ರವರ ಮೂಲಕ ಕೊಡಿಸಿರುತ್ತಾರೆ. ಆರೋಪಿಯು 2,00,000/- ರೂ ಹಣವನ್ನು ಪಡೆಯುವುದನ್ನು ನಾನು ನೋಲಡಿರುವುದಿಲ್ಲ ಆದರೆ ಆರೋಪಿಯು ತೆಗೆದುಕೊಂಡಿರುತ್ತಾನೆ. ನನ್ನ ಮಗುವನ್ನು ಆರೋಪಿಯು ಹುಟ್ಟಿದ ದಿನ ನೋಡಿರುತ್ತಾರೆ ನಂತರ ನೋಡಲು ಬಂದಿರುವುದಿಲ್ಲ. ಆರೋಪಿ ವ್ಯವಸಾಯ ಮಾಡುತ್ತಾನೆ. ಆರೋಪಿಯ ಬಳಿ ಟ್ರಾಕ್ಟರ್ ಇರುವುದಿಲ್ಲ ಎಂದರೆ ಸಾಕ್ಷಿಯು ಇತ್ತು ಆದರೆ ಈಗ ಅದನ್ನು ಸಾಲ ಕೊಟ್ಟವರು ಜಪ್ತಿ ಮಾಡಿರುತ್ತಾರೆ.

( ಮುಂದುವರೆದ ಪಾಟೀ ಸವಾಲಿಗೆ ಸಮಯ ಕೇರಿದ್ದು, ಸಮಯ ನೀಡಲಾಯಿತು.)
ನನ್ನ ಉಕ್ತಲೇಖನದ ಮೇರೆಗೆ ತೆರದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.

ಓ ಹೇ ಕೇ ಸ ಇದೆ ಎಂ ಓ
ಸಹಿ/-
**1** ನೇ ಹೆಚ್ಚುವರಿ ಸಿ.ಜೆ ಮತ್ತು ಪ್ರದನ್ಯಾದಂ,
ನಂಜನಗೂಡು